ತೆಂಗಿನ ಮರಕ್ಕೆ ಪರಿಹಾರ

1916(2087); ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ)

ಅ) ರಾಜ್ಯದಲ್ಲಿ ಬರಗಾಲದಿಂದ ಎಷ್ಟು ಲಕ್ಷ ತೆಂಗಿನ ಮರಗಳು ಹಾಳಾಗಿವೆ;

ಆ) ಸರ್ಕಾರ ಎಷ್ಟು ಲಕ್ಷ ತೆಂಗಿನ ಮರಗಳಿಗೆ ಪರಿಹಾರ ಘೋಷಿಸಿದೆ;

ಇ) ಈ ಬಗ್ಗೆ ಪರಿಹಾರ ನೀಡಿರುವ ಪರಿಹಾರ ಮೊತ್ತ ಎಷ್ಟು;

ಈ) ಪರಿಹಾರ ಮೊತ್ತ ನೀಡಲು ಅನುಸರಿಸಿದ ಮಾರ್ಗಸೂಚಿ ಏನು;

ಶ್ರೀ ಶಾಮನೂರು ಶಿವಶಂಕರಪ್ಪ (ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು)

ಅ) ರಾಜ್ಯದಲ್ಲಿ ಬರಗಾಲದಿಂದ ಸುಮಾರು 248 ಲಕ್ಷ ತೆಂಗಿನ ಮರಗಳು ಹಾನಿಗೊಳಗಾಗಿವೆಯೆಂದು ಅಂದಾಜಿಸಲಾಗಿದೆ.

ಆ), ಇ) & ಈ) ಬರಪೀಡಿತ ಹಾಗೂ ಕೀಟ ಮತ್ತು ರೋಗ ಬಾಧಿತ ತೆಂಗಿನ ತೋಟಗಳ ಪುನಶ್ಚೇತನಕ್ಕಾಗಿ ಸಂಪೂರ್ಣವಾಗಿ ಒಣಗಿರುವ ತೆಂಗಿನ ತೋಟಗಳನ್ನು ಬುಡ ಸಮೇತ ಕಿತ್ತು ತೆಗೆದು ಪರ್ಯಾಯ ಬೆಳೆಗಳನ್ನು ಬುಡ ಸಮೇತ ಕಿತ್ತು ತೆಗೆದು ಪರ್ಯಾಯ ಬೆಳೆಗಳನ್ನು ಬೆಳೆಸಲು ಪ್ರತಿ ಹೆಕ್ಟೇರ್‌ಗೆ `20,000/- ರಂತೆ ಹಾಗೂ ಭಾಗಶಃ ಹಾನಿಗೊಳಗಾದ ತೆಂಗಿನ ತೋಟಗಳ ವೈಜ್ಞಾನಿಕ ಪುನಶ್ಚೇತನಕ್ಕೆ `15000/- ರಂತೆ ಪ್ರತಿ ಹೆಕ್ಟೇರ್‌ಗೆ ಸಹಾಯಧನವನ್ನು ನೀಡಲಾಗುತ್ತಿದೆ. 2013-14ನೇ ಸಾಲಿನಲ್ಲಿ ಅಂದಾಜು 14.00 ಲಕ್ಷ ತೆಂಗಿನ ಮರಗಳಿಗೆ ಎಂದರೆ 9400 ಹೆಕ್ಟೇರ್ ಪ್ರದೇಶಕ್ಕೆ `843.59 ಲಕ್ಷಗಳ ಸಹಾಯಧನವನ್ನು ವಿತರಿಸಲಾಗಿದೆ.

ಹಾಸನ ನಗರದ ವರ್ತುಲ ರಸ್ತೆ ಕಾಮಗಾರಿ

1917(2861); ಶ್ರೀ ಕುಮಾರಸ್ವಾಮಿ ಎಚ್.ಕೆ. (ಸಕಲೇಶಪುರ)

ಅ) ಹಾಸನ ನಗರದ ಹೊರವಲಯದ ವರ್ತುಲ ರಸ್ತೆ ಕಾಮಗಾರಿಯು ಸಾಲಗಾಮೆ ರಸ್ತೆಯಿಂದ ಬೇಲೂರು ರಸ್ತೆ ಹಾಗೂ ಸಕಲೇಶಪುರ ರಸ್ತೆ